ದಿಃ 06.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯವಿಚಾರಣೆಃ ವಾದಿ (Appellant) ಪರ ಶ್ರೀ ಎಂ.ಡಿ ವಕೀಲರಿಂದ ,**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ಈ ದಿವಸ ನಾನು ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

1. ದಿಃ 05-08-2008 ರ ಕ್ರಯ ಪತ್ರದ ಆನ್ ಲೈನ್ ಪ್ರತಿಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಡಿ-08 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ರಾಘವೇಂದ್ರ. ಡಿ.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿಃ 09.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಹೆಚ್.ಬಿ.ಎಸ್ ವಕೀಲರಿಂದ ,**

1. ವಾದಿಯು ಯಾವಾ ವಿಚಾರಕ್ಕೆ ಸಂಬಂಧಪಟ್ಟಂತೆ ದಾವೆ ಮಾಡಿರುತ್ತಾರೆಂದು ನನಗೆ ಗೊತ್ತಿರುತ್ತದೆ. ದಾವಾ ವಿಚಾರಗಳನ್ನು ತಿಳಿದುಕೊಂಡು ನಾನು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ವಾದಿಗಳು ಸರ್ವೆ ನಂ. 68/3 ರಲ್ಲಿನ 03 ಎಕರೆ 16 ವರೆ ಗುಂಟೆಗೆ ಸಂಬಂದಪಟ್ಟಂತೆ ದಾವೆ ಮಾಡಿರುತ್ತಾರೆ ಎಂದರೆ ಸರಿ. ನಿಡಿ-08 ಕ್ರಯಪತ್ರ ದಿಃ 05-08-2008 ಕ್ಕೆ ನಾನಾಗಲೀ ಅಥವಾ ನನ್ನ ತಾಯಿಯಾಗಲೀ ಸಾಕ್ಷಿದಾರರಾಗಿ ಸಹಿ ಮಾಡಿರುವುದಿಲ್ಲ. ನಿಡಿ-08 ದಾಖಲೆಯ ಬಗ್ಗೆ ನಾನು ತಕರಾರಿನಲ್ಲಿ ಹೇಳಿರುವುದಿಲ್ಲ. ನಿಡಿ-08 ಕ್ರಯಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಡಿ-08 ಕ್ರಯಪತ್ರ ಸರ್ವೆ ನಂ. 68/2 ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸರ್ವೆ ನಂ. 68/2 ರಲ್ಲಿನ ಎ-0-29.01.2 ಗುಂಟೆ ಜಮೀನ

ಪೈಕಿ ಎ0-08/1/4 ಗುಂಟೆ ಮಾರಾಟ ಮಾಡಿರುವ ದಾಖಲೆ ಎಂದರೆ ಸರಿ. ನಿಡಿ-08 ರ ಕ್ರಯಪತ್ರದ ಚಕ್ಕುಬಂಧಿಯಲ್ಲಿ ದಕ್ಷಿಣ ಭಾಗಕ್ಕೆ ಬೀಬಿ ಜಾನ್ ರವರ ಜಮೀನು ಎಂದು ಬರೆದಿರುತ್ತದೆ ಆದರೆ, ಯಾವಾ ಸರ್ವೆ ನಂಬರ್ ಎಂದು ಬರೆದಿರುವುದಿಲ್ಲ ಎಂದರೆ ಸರಿ. ಭಾನಾಬೀರವರ ಜಮೀನಿನ ಪಕ್ಕದಲ್ಲಿ ನನ್ನ ಜಮೀನು ಇದೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಸರ್ವೆ ನಂ. 68/3 ರ ಆರ್.ಟಿ.ಸಿ ಯನ್ನು ತೋರಿಸಿ ಅದು ರಜೀಯಾ ಬೀ ಮತ್ತು ಇತರರಿಗೆ ಸೇರಿರುತ್ತದಾ ಎಂದರೆ ಸಾಕ್ಷಿಯು ಹೌದೆಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಯು ಒಪ್ಪಿಕೊಂಡಂತಹ ಆರ್.ಟಿ.ಸಿಯನ್ನು **ನಿಪಿ-11** ಎಂದು ಗುರುತಿಸಲಾಯಿತು. ಮೇಹಾಬೂಬ್ ಸಾಬ್ ರವರು ದಾವೆ ನಡೆಯುತ್ತಿರ ಬೇಕಾದರೆ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ವಾದಿ 01(ಎ) ಯಿಂದ ವಾದಿ 01(ಇ) ರವರು ವಾದಿ ಮೇಹಬೂಬ್ ಸಾಬ್ ರವರ ವಾರಸುದಾರರು ಎಂದರೆ ಸರಿ. ಮುಟೇಶನ್ ಅನ್ನು ನೋಡಿದರೆ ಅದು ಏನೆಂದು ನನಗೆ ಗೊತ್ತಾಗುತ್ತದೆ. ಸಾಕ್ಷಿಗೆ ಒಂದು ಮಟೇಶನ್ ಪ್ರತಿಯನ್ನು ತೊರಿಸಿ ಅದು ಸರ್ವೆ ನಂ. 68/3 ರ ಮುಟೇಶನ್ ಪ್ರತಿ ಎಂದರೆ ಹೌದೆಂದು ಹೇಳುತ್ತಾರೆ. ಸಾಕ್ಷಿಯು ಒಪ್ಪಿಕೊಂಡಂತಹ ಮುಟೇಶನ್ ಅನ್ನು **ನಿಪಿ-12** ಎಂದು ಗುರುತಿಸಲಾಯಿತು. ಸರ್ವೆ ನಂ. 68/2 ರ ಜಮೀನು ಸರ್ವೆ ನಂ. 68/3 ರಲ್ಲಿನ ಜಮೀನಿಗೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 68/2 ರ ಪಕ್ಕದಲ್ಲಿ ನನ್ನ ತಾಯಿಯ ಜಮೀನಿರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸಂಬಂಧವಿಲ್ಲದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ